ಸಂಜೆಗತ್ತಲು ದಟ್ಟವಾಗುತ್ತಿತ್ತು. ಆಶ್ರಮದಲ್ಲಿ ಶಾಂತ, ವಿಲಕ್ಷಣ ನಿಶ್ಯಬ್ದ ಆವರಿಸಿತ್ತು. ಆದರೆ, ಆಶ್ರಮ ನಿರ್ಜನವಾಗೇನೂ ಇರಲಿಲ್ಲ. ಗೌತಮರ ಭಾಗಶಃ ಶಿಷ್ಯರೆಲ್ಲಾ ಆಗಲೇ ಬಂದು ಸೇರಿದ್ದರು. ಕೆಲವರು ಕುಟುಂಬ ಸಮೇತರಾಗಿ ಬಂದ ಕಾರಣ, ಚಿಕ್ಕ ಮಕ್ಕಳ ಅಳು, ನಗು, ರಚ್ಚೆ ರಂಪಾಟಗಳು ಆಗಾಗ ಕೇಳಿ ಬರುತ್ತಿದ್ದವು. ಅವುಗಳ ತಾಯಂದಿರು ವಾತಾವರಣದ ಗಾಂಭೀರ್ಯವನ್ನು ಗಲಿಬಿಲಿಗೊಳಿಸುತ್ತಿರುವ ಮಕ್ಕಳನ್ನು ಗದರಿಸುತ್ತ, ಹೊಡೆಯುವವರಂತೆ ನಟಿಸುತ್ತ ಸುಮ್ಮನಿರಿಸಲು ಪ್ರಯತ್ನಿಸುತ್ತಿದ್ದರು.

ಯಾರ ಮುಖದಲ್ಲೂ ನಗುವಿನ ಸುಳಿವಿಲ್ಲ. ಕಳೆಯಿಲ್ಲ. ಎಲ್ಲರಲ್ಲೂ ದುಗುಡ, ಕಾತುರ, ನಿಟ್ಟುಸಿರುಗಳು. ಕತ್ತಲು ಹೆಚ್ಚುತ್ತಿದ್ದಂತೆ ಆಶ್ರಮದ ಸ್ತ್ರೀಯರು ಒಂದೊಂದೇ ದೀಪಗಳನ್ನು ಹಚ್ಚತೊಡಗಿದರು. ಆ ಮಂದಬೆಳಕು ವಿಲಕ್ಷಣತೆಯನ್ನು ಇನ್ನಷ್ಟು ಹೆಚ್ಚಿಸಿತು. ಎಲ್ಲರೂ, ಆ ದೊಡ್ಡ ಕುಟೀರದ ಎದುರಿಗಿನ ವಿಶಾಲ, ಸ್ವಚ್ಛ ಬಯಲಿನಲ್ಲಿ, ಮಿಸುಕಾಡದೆ ತಲೆತಗ್ಗಿಸಿ ಕುಳಿತೇ ಇದ್ದರು, ಎಷ್ಟೋ ಹೊತ್ತು!

ಚಂದ್ರ ಮೆಲ್ಲಗೆ ಮೋಡಗಳ ಮರೆಯಿಂದ ಇಣುಕತೊಡಗಿದ. ಇದ್ದಕ್ಕಿದ್ದಂತೆ ಗುಂಪಿನಲ್ಲಿ ಸಣ್ಣಗೆ ಕಲರವವುಂಟಾಯ್ತು.

'ಗುರುಮಾತೆ ಬರ್ತಿದಾರೆ!' ಯಾರೋ ಪಿಸುದನಿಯಲ್ಲಿ ನುಡಿದರು. ಗುರುಗಳ ಕುಟೀರದಿಂದ ಸ್ವಲ್ಪ ದೂರದಲ್ಲಿದ್ದ ಆ ಚಿಕ್ಕ ಕುಟೀರದಿಂದ ನಿಧಾನ ಹೆಜ್ಜೆಗಳಲ್ಲಿ, ತಲೆತಗ್ಗಿಸಿ ಬರುತ್ತಿದ್ದರು ಗುರುಮಾತೆ – ಅಹಲ್ಯೆ!

ಗುಂಪಿನಲ್ಲಿ ಮೆಲುದನಿಯ ಕಲರವ. ಕೆಲವರ ಮುಖದಲ್ಲಿ ವ್ಯಂಗ್ಯನಗೆ. ಅಪಹಾಸ್ಯದ ನಗೆ.

ಕೆಲ ಪುರುಷರ ಕಂಗಳಲ್ಲಿ ಕುತೂಹಲದ, ಕುತ್ಸಿತ ಭಾವ.

ಅಹಲ್ಯೆ ಯಾರತ್ತಲೂ ತಿರುಗಿ ನೋಡಲಿಲ್ಲ. ಯಾರನ್ನೂ ಮಾತಾಡಿಸಲೂ ಇಲ್ಲ.

ತಲೆಯನ್ನು ಕೊಂಚ ಮೇಲೆತ್ತಿ, ನೇರವಾಗಿ ಗುರುಗಳ ಕುಟೀರದ ಒಳಗೆ ಪ್ರವೇಶಿಸಿದ್ದಳು. ಜೊತೆಗಿದ್ದವಳು, ಸಾಕುಮಗಳು ಶ್ವೇತಾಂಬರಿ!

ಕುಟೀರದಲ್ಲಿ ಮಬ್ಬುಗತ್ತಲಿತ್ತು.

ಕಣ್ಣುಗಳು ಆ ಮಂದಬೆಳಕಿನ ವಾತಾವರಣಕ್ಕೆ ಹೊಂದಿಕೊಂಡಾಗ ಕಾಣಿಸಿತು, ಮೂಲೆಯಲ್ಲಿ, ಮೃಗಚರ್ಮವನ್ನು ಹಾಸಿ ಮಾಡಿದ್ದ ಒರಟು ಹಾಸಿಗೆಯ ಮೇಲೆ, ಜೀವಚ್ಛವದಂತೆ ಮಲಗಿದ್ದರು ಗೌತಮ!

ದೇಹ ಸಂಪೂರ್ಣ ಕೃಶವಾಗಿ, ಎಲುಬುಗಳಷ್ಟೇ ಕಾಣಿಸುತ್ತಿದ್ದವು. ಪ್ರಯಾಸದಿಂದ ಉಸಿರಾಡುವಂತೆ ಎದೆ ಕದಲುತ್ತಿತ್ತು. ಮುಖದಲ್ಲಿ ಚೇತನದ ಲವಲೇಶವೂ ಇರಲಿಲ್ಲ.

ಗುರುಗಳ ಕೈ ಹಿಡಿದು ನಾಡಿಬಡಿತ ಪರೀಕ್ಷಿಸುತ್ತಿದ್ದ ವೈದ್ಯ ವೃಷಭದೇವ, ಅಹಲ್ಯೆ ಬಂದುದನ್ನು ಆಗತಾನೆ ಗಮನಿಸಿದವನಂತೆ ಚಕಿತನಾಗಿ ನೋಡಿದ. ಆನಂತರ ಮಾತಾಡದೆ ಪಕ್ಕಕ್ಕೆ ಸರಿದು ಜಾಗ ಮಾಡಿಕೊಟ್ಟ.

ಅಹಲ್ಯೆ ಹಾಸಿಗೆಯ ಪಕ್ಕ ಮಂಡಿಯೂರಿ ಕುಳಿತಳು.

ಗುರುಗಳ ಕಣ್ಣುಗಳು ಮುಚ್ಚಿಕೊಂಡೇ ಇದ್ದವು. ಅಹಲ್ಯೆಯ ನಯನಗಳು ತುಂಬಿ ಬಂದವು...

ಮಸುಕಾದ ಕಂಗಳ ಹಿಂದೆ ಗತಿಸಿದ ದಿನಗಳ ನೆನಪಿನ ಚಿತ್ರಗಳು...

ಅಹಲ್ಯೆ ಹುಟ್ಟಿದ್ದೂ ಇಂಥದ್ದೇ ಒಂದು ಆಶ್ರಮದಲ್ಲಿಯಲ್ಲವೇ? ಆದರೆ, ಅಲ್ಲಿಯ ವಾತಾವರಣ ಹೀಗಿರಲಿಲ್ಲ. ಅಪ್ಪ, ಅಮ್ಮ ಆಶ್ರಮದಲ್ಲಿ ಎಲ್ಲ ಬಂಧು ಬಾಂಧವರೊಂದಿಗೆ ತುಂಬ ಸ್ನೇಹದಿಂದ, ಅನ್ಯೋನ್ಯದಿಂದ ಇರುತ್ತಿದ್ದರು.